ದಿ.26-04-2024 ರಂದು ಆರೊಪಿಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀಸಾಲು ಮಾಡಲು ನ್ಯಾಯಾಲಯವು ಆರೋಪಿಪರ ವಕೀಲರಿಗೆ ಅನುಮತಿ ನೀಡಲಾಯಿತು.

ದಿ.29-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಆರೋಪಿ ಪರ ಶ್ರೀ ಎಲ್ ಯು ವಕೀಲರಿಂದ.

2014 ರಿಂದ ನಾನು ವೈಜ್ಞಾನಿಕ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಬೆಂಗಳೂರಿನಲ್ಲಿ ತರಬೇತಿ ಪಡೆದಿರುತ್ತೇನೆ.

ಇಲ್ಲಿಯವರೆಗೆ ನಾನು ಒಟ್ಟು 100 ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಪರೀಕ್ಷೆ ಮಾಡಿ ವರದಿ ನೀಡಿರುತ್ತೇನೆ. ಪೊರವಿಕ್ ತಂತ್ರಾಂಶದಲ್ಲಿ ನಾನು ಪರೀಕ್ಷೆ ಮಾಡಿ ವರದಿ ನೀಡಿರುತ್ತೇನೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಧ್ವನಿಸುರಳಿ ಇದೇ ಇರುತ್ತದೆ ಎಂದು ಪರೀಕ್ಷೆ ಮಾಡಬೇಕಾಗದಲ್ಲಿ ವಿವಾದಿತ ಧ್ವನಿ ಸುರಳಿ ಮತ್ತು ಒಪ್ಪ ತಕ್ಕ ಧ್ವನಿಸುರಳಿ ಎರಡನ್ನುಹೋಲಿಕೆ ಮಾಡಿ , ಪರೀಕ್ಷಿಸಿದಾಗ ನಿಜವಾದ ಧ್ವನಿಸುರಳಿ ಯಾರದು ಇರುತ್ತದೆ ಎಂದು ಕಂಡುಹಿಡಿಯಲು ಸಾಧ್ಯತೆ ಇರುತ್ತದೆ.

ಅದೇ ರೀತಿ ಈ ಪ್ರಕಣದಲ್ಲಿ ವಿವಾದಿತ ಮತ್ತು ಒಪ್ಪತಕ್ಕ ಧ್ವನಿಸುರಳಿಗಳನ್ನು ಕಳುಹಿಸಿರುವುದಿಲ್ಲ.

ತನಿಖಾಧಿಕಾರಿಗಳು ವಿಡಿಯೋ ಮಾತ್ರ ಕಳುಹಿರುತ್ತಾರೆ ವಿನಹ ಧ್ವನಿ ಪರೀಕ್ಷೆ ಮಾಡಲು ಕಳುಹಿಸಿರುವುದಿಲ್ಲ . ಧ್ವನಿ ಸುರಳಿ ಬಗ್ಗೆ ಏನಾದರೂ ದಾಖಲೆ ಕೊಡಿ ಎಂದು ನಾವು ತನಿಖಾಧಿಕಾರಿಗಳಿಗೆ ಕೇಳಿರುವುದಿಲ್ಲ.

ವಿಡಿಯೋ ಮತ್ತು ಆಡಿಯೋಗಳನ್ನು ಎಡಿಟ್ ಮಾಡಬಹುದು ಎಂಬ ಪ್ರಶ್ನೆಗೆ ಸಾಕ್ಷಿ- ಕೆಲವು ತಂತ್ರಾಂಶಗಳನ್ನು ಬಳಸಿ ಎಡಿಟ್ ಮಾಡಬುದು ಎಂದು ಉತ್ತರಿಸಿರುತ್ತಾರೆ. ಆದರೆ ಕೆಲವು ಉಪಕರಣಗಳನ್ನು ಬಳಸಿ ಎಡಿಟ್ ಮಾಡಬಹುದು , ಆದರೆ ಈ ಈ ಕೇಸಿನಲ್ಲಿ ಆ ರೀತಿ ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ವಿಡಿಯೋವನ್ನು ಫ್ರೇಮ್‌ಅನಾಲಿಸಸ್ ಮಾಡಿದ ಆಧಾರದ ಮೇಲೆ ತನಿಖಾಧಿಕಾರಿಗಳು ಕಳುಹಿಸಿದ ವಿಡಿಯೋ ನೈಜತೆಯಿಂದ ಕೂಡಿದೆ ಎಂದು ಉತ್ತರಿಸಿರುತ್ತಾರೆ. ಸದರಿ ಆರ್ಟಿಕಲ್ಸ್ ಚಾಸಾ-25 ರವರ ಮೋಬೈಲ್ ಫಾರೆನ್ಸಿಕ್ ವಿಭಾಗದಿಂದ ನಮಗೆ ಬಂದಿರುತ್ತವೆ. ಈ ವಿಷಯವನ್ನು ನಾನು ನನ್ನ ವರದಿಯಲ್ಲಿ ನಮೂದು ಮಾಡಿರುತ್ತೇನೆ.

ಆರ್ಟಿಕಲ್ ಪಡೆದ ನಂತರ ನಾವು ಯಾವ ನಿಯಮ ಅಳವಡಿಸಿ ಪರೀಕ್ಷೆ ಮಾಡಲಾಗಿದೆ ಎಂದು ನಮ್ಮ ವರದಿಯಲ್ಲಿ ನಮೂದು ಮಾಡಲಾಗಿರುತ್ತದೆಯೇ ವಿನಹ ಸದರಿ ವಿಷಯವನ್ನು ನಾವು ತನಿಖಾಧಿಕಾರಿಗೆ ನೀಡಿರುವುದಿಲ್ಲ.

ಸದರಿ ಮೋಬೈಲ್ ಮತ್ತು ಸಿಮ್ ಆರೋಪಿ ಖರೀದಿ ಮಾಡಿದ ಬಗ್ಗೆ ನಮಗೆ ಗೊತ್ತಾಗುವುದಿಲ್ಲ, ಇವು ಮೃತ ವ್ಯಕ್ತಿಯವು ಇರುತ್ತವೆ ಎಂದು ತಿಳಿಯಲು ತನಿಖಾಧಿಕಾರಿಯಿಂದ ಯಾವುದಾದರು ದಾಖಲೆ ಕಳುಹಿಸಿರುವುದಿಲ್ಲ. ಪುನಃ ನಮಗೆ ಪರೀಕ್ಷೆ ಮಾಡಲು ದಾಖಲೆಗಳು ಬೇಕು ಎಂದು ತನಿಖಾಧಿಕಾರಿಗಳನ್ನು ನಾವು ಏನೂ ಕೇಳಿರುವುದಿಲ್ಲ.

ಆರೋಪಿಗೆ ಆಗದೇಯಿರುವ ವ್ಯಕ್ತಿಗಳು , ಕೇಸಿನ ಫಿರ್ಯಾದಿ , ಚಾಸಾ-1 ಮತ್ತು ಅವರ ಸಂಬಂಧಿಕರು ಸೇರಿ ಸದರಿ ವಿಡಿಯೋ ಮತ್ತು ಆಡಿಯೋ ಸೃಷ್ಟಿಸಿ, ಕಳುಹಿಸಿದವುಗಳನ್ನು ನಾವು ಪರೀಶನೆ ಮಾಡಿ ವರದಿ ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

ನಿಪಿ.19 ವರದಿಗೂ ಆರೋಪಿಗೂ ಯಾವುದೇ ರೀತಿಯ ಸಂಬಧವಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರ ಮಾತು ಕೇಳಿ ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ನಾನು ಸಮರ್ಪಕವಾಗಿ ನಿಯಮಾವಳಿಗಳನ್ನು ಅನುಸರಿಸದೇ ಪರೀಕ್ಷೆ ಮಾಡಿ , ಸುಳ್ಳು ವರದಿನೀಡಿ , ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.